ಭುಳ್ ಎಂದು ಶೇಖರನ ಕಡುಗಪ್ಪು ಬಣ್ಣದ, ತನ್ನನ್ನೇ ನಂಬಿದ್ದ ಆ ಕಣ್ಣುಗಳು ಪುರುವನ್ನು ಕೆಣಕಿದವು. ಈ ನೆನಪುಗಳನ್ನು ಮರೆಯಲೆಂದೇ ಅಲ್ಲವೇ ಅಂದು ಇದೇ ಕೊಂಕಣ ಎಕ್ಸ್‌ಪ್ರೆಸ್ಸಿನಲ್ಲಿ ಕುಳಿತು ಮುಂಬೈ ತಲುಪಿದ್ದು! ಪುರು ಮುಂಬೈ ಸೇರಿ, ಕುಮಟೆಯತ್ತ ಸುಳಿಯದೆ ಹತ್ತು ವರ್ಷಗಳೇ ಕಳೆದಿರಬೇಕು!!

ಮದುವೆಯಾಗಲೇಬಾರದ ವಯಸ್ಸಲ್ಲದಿದ್ದರೂ ಮದುವೆ ಅಂತ ಆಗಲೇಬೇಕೆಂದೆನಿಸಿದ್ದು ಅಮ್ಮನ ಸಮಾಧಾನಕ್ಕಾಗಿ. ಹೆಂಡತಿಯ ಅವಶ್ಯಕತೆ ಕೆಲವೊಂದು ರಾತ್ರಿಗಳಲ್ಲಿ ಪುರುವಿನ ಅರಿವಿಗೆ ಬಂದಿದ್ದು ಬಿಟ್ಟರೆ ಮತ್ಯಾವತ್ತೂ ಹೆಂಡತಿಯ ಜರೂರತ್ತು ಅಷ್ಟಾಗಿ ಬಂದಿರಲಿಲ್ಲ.

ಆದರೂ ಪುರುವಿಗೆ ಯಾಕೋ ಅಮ್ಮನ ಮೇಲೇ ಸಂಶಯ, ವಯಸ್ಸು ಮತ್ತು ಕಸುಬನ್ನು ಮುಚ್ಚಿಟ್ಟು ಹುಡುಗಿಯನ್ನು ಮದುವೆಗೆ ಒಪ್ಪಿಸಿರಬಹುದೇ? ಇಲ್ಲದ ಆಸ್ತಿಗೆ 'ನಿನಗೆ ಹುಟ್ಟಬಹುದಾದ ಮಗನೇ ಉತ್ತರಾಧಿಕಾರಿ' ಎಂದು ಆಸೆ ತೋರಿಸಿರಬಹುದೇ? ಅಥವಾ ತನ್ನಂತೆ ವಯಸ್ಸು ಮೀರಿದ್ದರೂ ಬಾಸಿಂಗದ ಯೋಗ ಕಾಣದೆ ಒಂದಿಷ್ಟು ಚಡಪಡಿಸುವ ರಾತ್ರಿಗಳಲ್ಲಿ ಗಂಡನಿಗಾಗಿ ಹಂಬಲಿಸಿದ್ದವಳು ಮದುವೆಗೆ ಸುಲಭವಾಗಿ ಒಪ್ಪಿದಳೇ? ಮದುವೆಯಾಗುವ ಮನಸ್ಸಿಲ್ಲದಿದ್ದರೂ ಹುಡುಗಿಯ ಬಗ್ಗೆ 'ಯಾರವಳು ಯಾರವಳು ಬದುಕ ಬಾಗಿಲಿಗೆ ಬಂದವಳು…' ಎಂಬ ಕುತೂಹಲವಿದ್ದೇ ಇತ್ತು.

ಇನ್ನೇನು ಸ್ವಲ್ಪ ಹೊತ್ತಿನಲ್ಲಿಯೇ ಪುರು ಕುಮಟೆಯನ್ನು ತಲುಪುವವನಿದ್ದ. ಕುಮಟೆಯ ಹವೆ, ಮೀನು ವಾಸನೆ ಮುಂಬೈನ ವಾಸನೆಗಿಂತಲೂ ಬೇರೆಯೇ! ಕುಮಟೆಯ ಘಮಲಿನಲ್ಲಿ ಜೀವನಪರ್ಯಂತ ಮಾಸದ ಸಮುದ್ರದಂಚಿನ ಆಟಗಳಿವೆ, ಅಪ್ಪನ ಹೋಟೆಲ್ ಗಲ್ಲೆಯಲ್ಲಿರುವ ರೊಕ್ಕದ ಕಟ್ಟು, ಅಡುಗೆ ಮನೆಯಲ್ಲಿ ಹೆಣಗಾಡುವ ದೊರಗು ಕೈಯ ಅಮ್ಮ, ಮತ್ತೆ ಗಣಪತಿಯ ವಿಸರ್ಜನೆಯ ದಿನ ಆವರಿಸಿದ ಕತ್ತಲಾದ ಪುರುವಿನ ಬದುಕಿದೆ.

ತಿಂಗಳಾನುಗಟ್ಟಲೆ ಒಗೆಯದೇ ಅತ್ತರು ಮಾತ್ರ ಕಂಡ ತನ್ನ ಪ್ಯಾಂಟು, ಶರ್ಟು, ಕಾಚಾ ಹಾಗೂ ಅತ್ತರಿನ ಬಾಟಲಿಗಳೇ ತುಂಬಿದ್ದ ಬ್ಯಾಗನ್ನು ಹೆಗಲಿಗೇರಿಸಿ ಪುರು ಕುಮಟೆಯ ಸ್ಟೇಷನ್ನಿನಲ್ಲಿಳಿದ.

ಮುಂಬೈ ಬದುಕನ್ನು ಒಪ್ಪಿಕೊಂಡ ಪುರುವಿನಂಥವರ ಕೈಚೀಲದಲ್ಲಿ ಒಗೆಯದಿರುವ ಬಟ್ಟೆಗಳಿದ್ದರೆ ಅದು ಹೇಗೆ ಅಪರಾಧವಾದೀತು!! ನಿನ್ನೆ ಧರಿಸಿದ ಕಾಚಾವನ್ನು ಇಂದು ತಿರುವುಮುರುವಾಗಿ ಹಾಕಿಕೊಂಡು, ಮರುದಿನ ಮತ್ತೆ ಅದೇ ಕಾಚಾವನ್ನು ಮತ್ತೆ ತಿರುಗಾ ಮುರುಗಾ ಹಾಕಿ ಅಂತೂ ಒಂದು ವಾರ ಕಳೆಯುವುದು, ಅಪರೂಪಕ್ಕೊಮ್ಮೆ ತೊಳೆದ ಕಾಚಾ ಒಣಗದೆ ಒದ್ದೆಯದನ್ನೇ ಧರಿಸಿದಾಗ ಆಗುವ ಕಡಲ ಕೊರೆತದಂತಹ ತೊಡೆ ಕೊರೆತವನ್ನು ಅಡರಾಬಡರಾ ಕಾಲು ಹಾಕಿ ಸಹಿಸುವುದು. ಇಂತಹವೆಲ್ಲ ಬದುಕಿನ ಭಾಗವಾದ ಮುಂಬೈ ಪುರುವಿನ ಬದುಕಿನಲ್ಲಿ ಒಂದಿಷ್ಟು ನೆಮ್ಮದಿಯನ್ನಂತೂ ತಂದುಕೊಟ್ಟಿತ್ತು.

ಕುಮಟೆಯ ಬಂದರು ರಸ್ತೆಯಲ್ಲಿರುವ ತನ್ನ ಮನೆಯ ಗೇಟನ್ನು ತಲುಪುತ್ತಲೇ ಪಕ್ಕದಮನೆಯ ಶೇಖರನ ತಂಗಿ ಸುಮನಾ, 'ಆಯಿ, ಇಲ್ಲಿ ನೋಡು, ಯಾರು ಬಂದ್ರು ಅಂತ!! ಬರೋಬ್ಬರಿ ಹತ್ತು ವರ್ಷದ ನಂತರ ಪುರು ಬಂದಿದ್ದಾನೆ' ಎನ್ನುತ್ತಾ ಖುಷಿಯಿಂದ ಆಯಿಯನ್ನು ಕರೆದಳು.

ಒಂದು ಕಾಲದಲ್ಲಿ ತನ್ನ ಮನೆಯೇ ಎಂಬಂತಿದ್ದ ಶೇಖರನ ಮನೆ, ಮಾಮಾ–ಮಾಮಿ ಆಗಿಬಿಟ್ಟಿದ್ದ ಶೇಖರನ ಅಪ್ಪಅಮ್ಮ, ತನ್ನ ಪುಟ್ಟ ಗೆಳತಿ ಎಂದು ಭಾವಿಸಿದ್ದ ಶೇಖರನ ತಂಗಿ ಸುಮನಾ… ಒಡಹುಟ್ಟಿದವರು ಅಂತ ಸ್ವಂತದವರು ಯಾರೂ ಇರದುದರಿಂದಲೋ ಏನೋ ಯಾವತ್ತಿಗೂ ಪುರುವಿಗೆ ಪಕ್ಕದ ಮನೆಯ ತನ್ನದೆ ವಾರಿಗೆಯ ಶೇಖರ ಬೇರೆಯವನು ಎನಿಸಿರಲೇ ಇಲ್ಲ. ಶೇಖರನ ಮನೆಯ ಹುಳಿಯಲ್ಲಿ ತೇಲುವ ಬಂಗಡೆ ಪುರುವಿನ ಬಾಯಲ್ಲಿ ಮುಳುಗಿ ಹೊಟ್ಟೆಯಲ್ಲಿ ಜೀರ್ಣವಾಗುತ್ತಿತ್ತು.